131 ನೀರಾವರಿ ಪಂಪುಸೆಟ್ಟುಗಳಿಗೆ ಮಾರ್ಚ್ 91ರ ಅಂತ್ಯದ ವೇಳೆಗೆ ವಿದ್ಯುತ್ ಸಂಪರ್ಕ ನೀಡಲಾಗುವುದು.

ಬಿಜಾಪುರ ಜಿಲ್ಲೆಯ ಗುಳೇದ ಗುಡ್ಡದಲ್ಲಿ ನೇಯ್ದ ರೇಷ್ಮೆ ಬಟ್ಟೆಯ ಮೇಲಿನ ಸೆಸ್

470 - ಶ್ರೀ ಹೆಚ್.ವೈ. ಮೇಟಿ (ಗಳೇದ ಗುಡ್ಡ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಳಕಲ್‌ನಲ್ಲಿ ನೇಯ್ದ ರೇಷ್ಮೆ ಬಟ್ಟೆ ಮತ್ತು ಸೀರೆಗಳ ಮೇಲೆ ಕೇವಲ ಶೇಕಡ 1 ರಂತೆ ಸೆಸ್ ವಿಧಿಸುತ್ತಿರುವುದು ನಿಜವೆ?

ಆ) ಹಾಗಿದ್ದರೆ ಗುಲೇದಗುಡ್ಡದಲ್ಲಿ ನೇಯ್ದ ರೇಷ್ಮೆ ಬಟ್ಟೆ ಮತ್ತು ಸೀರೆಗಳ ಮೇಲೆ ಶೇಕಡ 2ರಂತೆ ಸೆಸ್ ವಿಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಗುಲೇದಗುಡ್ಡದಲ್ಲಿ ನೇಯ್ದ ರೇಷ್ಮೆ ಬಟ್ಟೆ ಮತ್ತು ಸೀರೆಗಳ ಮೇಲೆ ವಿಧಿಸಲಾಗುತ್ತಿರುವ ಸೆಸ್‌ನ್ನು ಶೇಕಡ 1ಕ್ಕೆ ಇಳಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೆ?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು)

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ದಕ್ಷತೆ ಪರಿಶೋಧನೆ ಮತ್ತು ಜಾಗೃತ ವಿಭಾಗ

1088-ಶ್ರೀ ಹೆಚ್.ವೈ. ಮೇಟಿ (ಗುಳೇದಗುಡ್ಡ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷತೆ ಪರಿಶೋಧನೆ ಮತ್ತು ಜಾಗೃತ ವಿಭಾಗವನ್ನು ಎಂದು ರಚಿಸಲಾಯಿತು?

ಆ) ಬ್ಯೂರೋವಿನ ಅಧ್ಯಕ್ಷರು ಮತ್ತು ಇತರ ಸದಸ್ಯರುಗಳು ಯಾರು?

ಇ) ಈ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಸಂಖ್ಯೆ ಎಷ್ಟು?

ಈ) ವಿವಿಧ ಜಿಲ್ಲೆಗಳಲ್ಲಿ ತನಿಖೆ ಮಾಡಿರುವ ಸರ್ಕಾರಿ ಕಛೇರಿಗಳ ಸಂಖ್ಯೆ ಎಷ್ಟು?

ಉ) ಬ್ಯೂರೋವು ಯಾವುದೇ ಸರ್ಕಾರಿ ನೌಕರರ ಕಡ್ಡಾಯ ನಿವೃತ್ತಿಗೆ ಶಿಫಾರಸ್ಸು ಮಾಡಿದೆಯೆ?

ಊ) ಹಾಗಿದ್ದರೆ, ಸಾರ್ವಜನಿಕ ಕುಂದು ಕೊರತೆಗಳ ವಿಭಾಗವನ್ನು ಬ್ಯೂರೋವಿನೊಂದಿಗೆ ವಿಲೀನಗೊಳಿಸುವ ಯಾವುದೇ ಪ್ರಸ್ತಾವನೆ ಇದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) 21-5-1990 ರಂದು.

ಆ) ಅಧ್ಯಕ್ಷರು ಅಪರ ಮುಖ್ಯ ಕಾರ್ಯದರ್ಶಿ ಹುದ್ದೆಯ ದರ್ಜೆಯವರಾಗಿರುತ್ತಾರೆ. ಒಬ್ಬ ಸದಸ್ಯರು, ಅರಕ್ಷಕ ಮಹಾ ನಿರೀಕ್ಷಕರ ದರ್ಜೆಯವರಿದ್ದು, ಗ್ರೂಪ್ ಎ ದರ್ಜೆಯ (ಹಿರಿಯ ಶ್ರೇಣಿ) ಅರ್ಥಿಕ ಹಿನ್ನೆಲೆ ಇರುವವರಿಗೆ ಆದ್ಯತೆಯ ಮೇಲೆ ಮತ್ತೊಬ್ಬ ಸದಸ್ಯರ ಹುದ್ದೆಯನ್ನು ಇನ್ನು ತುಂಬಬೇಕಾಗಿದೆ.

ಇ) 59

ಈ) 97

ಉ) ಇಲ್ಲ.

ಊ) ಇಲ್ಲ. ಸಾರ್ವಜನಿಕ ಕುಂದು ಕೊರತೆಗಳ ವಿಭಾಗವು ಬ್ಯೂರೋವಿನ ಒಂದು ಭಾಗವಾಗಿದೆ.

ಗಡಿ ರಸ್ತೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಂಜೂರಾದ ಹಣದ ಬಗ್ಗೆ.

1069 - ಶ್ರೀ ಸುಭಾಸ್ ಜೋಶಿ (ನಿಪ್ಪಾಣಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಡಿ ರಸ್ತೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಮತ ಕ್ಷೇತ್ರಕ್ಕೆ ಮಂಜೂರಾದ ಹಣವೆಷ್ಟು?

ಆ) ರಸ್ತೆ ಕೆಲಸ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ಗಡಿ ಪ್ರದೇಶದ ರಸ್ತೆ ಅಭಿವೃದ್ಧಿ ಯೋಜನೆಯಡಿಯಲ್ಲಿ ನಿಪ್ಪಾಣಿ ಮತ ಕ್ಷೇತ್ರದಲ್ಲಿ ಬರುವ ಲೋಕೋಪಯೋಗಿ ಇಲಾಖೆ ರಸ್ತೆಗಳ ಅಭಿವೃದ್ಧಿಗಾಗಿ ಯಾವುದೇ ಹಣ ಮಂಜೂರು ಆಗಿರುವುದಿಲ್ಲ.

ಆ) ಗಡಿ ಪ್ರದೇಶ ಲೋಕೋಪಯೋಗಿ ಇಲಾಖೆ ರಸ್ತೆ ಅಭಿವೃದ್ಧಿ ಪ್ರಸ್ತಾವನೆಗಳಿಗೆ ಅನುದಾನ ಬಿಡುಗಡೆ ಆದನಂತರದ ಕ್ರಮ ತೆಗೆದುಕೊಳ್ಳಲಾಗುವುದು.

ನಿಪ್ಪಾಣಿ ಮಾರಾಟ ತೆರಿಗೆ ನಾಕಾದಿಂದ ವಸೂಲಿ ಮಾಡಲಾದ ತೆರಿಗೆ.

1070 - ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿಪ್ಪಾಣಿ ಮಾರಾಟ ತೆರಿಗೆ ನಾಕಾದಿಂದ ಕಳೆದ ವರ್ಷಗಳಲ್ಲಿ ವಸೂಲಿ ಮಾಡಲಾದ ಮಾರಾಟ ತೆರಿಗೆ ಮೊತ್ತವೆಷ್ಟು? (ವಾರ್ಷಿಕ ವಿವರ ನೀಡುವುದು)

ಆ) ಸರ್ಕಾರವು ಮಾರಾಟ ತೆರಿಗೆ ನಾಕಾವನ್ನು ನಿಪ್ಪಾಣಿಯಿಂದ ಸ್ಥಳಾಂತರಿಸುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ದಂಡದ ರೂಪದಲ್ಲಿ ನಿಪ್ಪಾಣಿ ಮಾರಾಟ ತೆರಿಗೆ ಚೆಕ್‌ಪೋಸ್ಟ್‌ನಲ್ಲಿ ಕಳೆದ ಎರಡು ವರ್ಷಗಳಲ್ಲಿ ವಸೂಲಾದ ಮೊತ್ತವು ಈ ರೀತಿ ಇದೆ.

1988-89 ರೂ 14.93 ಲಕ್ಷ

1989-90 ರೂ. 11.51 ಲಕ್ಷ

ಆ) ಈ ರೀತಿಯ ಯಾವುದೇ ಪ್ರಸ್ತಾವನೆಯಿರುವುದಿಲ್ಲ.

ಹುಬ್ಬಳ್ಳಿ - ಧಾರವಾಡದಲ್ಲಿನ ಪ್ರತಿ ಸರ್ಕಾರಿ ಕಛೇರಿಗೆ ನೀಡಲಾದ ವಾಹನ ಸಂಖ್ಯೆ

1046 - ಶ್ರೀ ಗೋಪಿನಾಥ್ ಆರ್. ಸಂಡ್ರಾ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡದಲ್ಲಿನ ಪ್ರತಿ ಸರ್ಕಾರಿ ಕಛೇರಿಗೆ ನೀಡಿರುವ ವಾಹನಗಳ ಸಂಖ್ಯೆ ಎಷ್ಟು.

ಆ) ಅದರಲ್ಲಿ ಉಪಯೋಗಿಸದೇ ಇರುವ ವಾಹನಗಳ ಸಂಖ್ಯೆ ಎಷ್ಟು ಮತ್ತು ಎಂದಿನಿಂದ ಉಪಯೋಗಿಸುತ್ತಿಲ್ಲ.

ಇ) ಅವುಗಳನ್ನು ವಿಲೇ ಮಾಡದೇ ಇರಲು ಕಾರಣಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅನುಬಂಧದಲ್ಲಿ ತೋರಿಸಲಾಗಿದೆ.